# ಕನ್ನಡ ಕಲಿಯುವ ಆಸೆ

ವಿದೇಶಗಳಿಂದ ಬಂದವರು ಇಂಗ್ಲಿಷ್ ಭಾಷೆಯನ್ನೇ ಪ್ರಮುಖ ಸಂವಹನ ಮಾಧ್ಯಮವಾಗಿ ಇಟ್ಟುಕೊಳ್ಳುತ್ತಾರೆ. ಏಕೆಂದರೆ ಇಂಗ್ಲಿಷ್ ಸಾರ್ವತ್ರಿಕ ಭಾಷೆ. ಹಿಂದಿ, ತಮಿಳು ಕಲಿಯುವ ಆಸಕ್ತಿ ತೋರಿದವರೂ ಅನೇಕರಿದ್ದಾರೆ. ಬೆಂಗಳೂರಿನಲ್ಲಿ ಬಹಳ ವರ್ಷದಿಂದ ನೆಲೆಯೂರಿರುವ ವಿದೇಶೀಯರು ಕನ್ನಡ ಕಲಿಯುವತ್ತ ಆಸಕ್ತಿ ತೋರುವುದು ಕಡಿಮೆ. ಆದರೆ ನ್ಯೂಯಾರ್ಕ್‌ನಿಂದ ಬಂದ ಜಾನ್ ಚಾಕೋಸ್ ಇವರೆಲ್ಲರಿಗಿಂತ ಭಿನ್ನ.

ಜಾನ್‌ಗೆ ಕನ್ನಡ ಕಲಿತು ಓದಿ ಬರೆಯಬೇಕು, ಮಾತನಾಡಬೇಕು ಎಂಬ ಅದಮ್ಯ ಹಂಬಲವಿದೆ. ಕನ್ನಡ ಮಾತನಾಡುವ ಉತ್ಸಾಹವಿದೆ. ಕಲಿಯಬೇಕು ಎಂಬ ಛಲ ಇದೆ. ಅರೆ ಬರೆ ಕನ್ನಡದಲ್ಲಿ ಮಾತನಾಡುತ್ತಲೇ ಇವರು ಇತ್ತೀಚೆಗೆ ಉತ್ತರ ಕರ್ನಾಟಕ ಇಡೀ ಸುತ್ತಿ ಬಂದಿದ್ದಾರೆ.

'ನಾನು ಮಾತನಾಡುವ 'ಕನ್ನಡೋ–ಇಂಗ್ಲಿಷ್' ಭಾಷೆ ಕಾಲೇಜು ಮಕ್ಕಳಿಗೆ ತಮಾಷೆ ಎನಿಸುತ್ತದೆ. ಇತ್ತೀಚೆಗೆ ಉತ್ತರ ಕರ್ನಾಟಕ ಪ್ರವಾಸ ಹೋದಾಗ ಇಂಗ್ಲಿಷ್–ಇಂಗ್ಲಿಷ್–ಕನ್ನಡ ಪದಕೋಶ ಜತೆಗೇ ಕೊಂಡೊಯ್ದಿದ್ದೆ. ಕಾಲೇಜು ವಿದ್ಯಾರ್ಥಿಗಳು ಪ್ರಶ್ನೆ ಕೇಳಿದಾಗೆಲ್ಲ ಪದಕೋಶ (ಡಿಕ್ಷನರಿ) ರೆಫರ್ ಮಾಡಿ ಮಾತನಾಡುತ್ತಿದ್ದೆ. ಇದು ನನಗೆ ಥ್ರಿಲ್ಲಿಂಗ್ ಎಕ್ಸ್‌ಪೀರಿಯನ್ಸ್ ಆಗಿದೆ' ಎಂದು ನಗುತ್ತಾರೆ ಜಾನ್.

ಜಾನ್ ಕಳೆದ ಎಂಟು ವರ್ಷಗಳ ಹಿಂದೆ ನ್ಯೂಯಾರ್ಕ್‌ನಿಂದ ಬಂದವರು. ಆರೇಕಲ್ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುವ ಜಾನ್‌ಗೆ ಎಂಟು ವರ್ಷ ಇಲ್ಲಿ ಹೇಗೆ ಕಳೆದು ಹೋಯಿತು ಎಂಬುದೇ ಅಚ್ಚರಿಯ ಸಂಗತಿ ಅಂತೆ. ಈ ಕೆಲಸಕ್ಕೆ ಕೊಂಚ ಬ್ರೇಕ್ ತಗೋಬೇಕು, ಈ ಕಂಪೆನಿ ಬಿಟ್ಟು ಬೇರೆ ಏನಾದರೂ ಸ್ವಂತ ಉದ್ಯೋಗ ಮಾಡಬೇಕು ಅನಿಸಿದರೂ ಈ ಊರು ಬಿಟ್ಟು ಎಲ್ಲಿಗೆ ಹೋಗಲಿ ಎಂಬ ಚಿಂತೆ ಅಂತೆ.

ಮೊಬೈಲ್ ಗೇಮಿಂಗ್ ಆ್ಯಪ್ ಅಭಿವೃದ್ಧಿ ಪಡಿಸುವುದು ಇವರ ಮೆಚ್ಚಿನ ಹವ್ಯಾಸವಂತೆ. ಮಕ್ಕಳಿಗೆ ಪ್ರಿಯವಾಗುವ ವಿವಿಧ ಗೇಮ್ಸ್‌ಗಳನ್ನು ಈಗಾಗಲೇ ಡೆವಲಪ್ ಮಾಡಿದ್ದಾರಂತೆ. ಸ್ಕ್ರೀನ್ ರೈಟಿಂಗ್ ಮತ್ತೊಂದು ಹವ್ಯಾಸ. ಇದನ್ನೂ ವೃತ್ತಿಯ ಜತೆ ಜತೆಗೇ ಮಾಡುತ್ತಾರೆ ಜಾನ್.

ನ್ಯೂಯಾರ್ಕ್‌ನ ಪುಟ್ಟ ಪಟ್ಟಣ ಚಾರ್ಲೋಟ್ ಹಿಲ್ ಎಂಬಲ್ಲಿ ಹುಟ್ಟಿ ಬೆಳೆದ ಜಾನ್ ಅವರ ಊರಿನಲ್ಲಿ ಜನಸಂಖ್ಯೆ ಬಹಳ ಕಡಿಮೆ. ಇವರಿಗೆ 13 ವರ್ಷ ಆದಾಗ ಅವರ ಕುಟುಂಬ ಫ್ಲೋರಿಡಾಕ್ಕೆ ವರ್ಗವಾಯಿತು. ಜಾನ್‌ಗೆ ಫ್ಲೋರಿಡಾಕ್ಕಿಂತಲೂ ಚಾರ್ಲೋಟ್ ಹಿಲ್ ಜಾಗ ಬಹಳ ಇಷ್ಟವಂತೆ. ಅಲ್ಲಿ ಕಳೆದ ಬಾಲ್ಯದ ದಿನಗಳು ಇನ್ನೂ ಅವರ ನೆನಪಿನಂಗಳದಲ್ಲಿ ಹಸಿರಾಗಿದೆಯಂತೆ.

'ಚಿಕ್ಕ ವಯಸ್ಸಿನಲ್ಲಿ ಬೇಟೆಯಾಡುವುದು, ಮೀನು ಹಿಡಿಯುವುದು, ಹಾರ್ಸ್ ರೈಡಿಂಗ್, ಡ್ರೈವಿಂಗ್ ಮುಂತಾದವನ್ನು ಉತ್ತಮ ಹವ್ಯಾಸವಾಗಿ ರೂಢಿಸಿ ಕೊಂಡಿದ್ದೆ. ನಮ್ಮ ಊರು ಚಿಕ್ಕದಾದರೂ ಎಲ್ಲ ರೀತಿಯ ಅನುಕೂಲಗಳಿದ್ದವು. ಮನರಂಜನೆಗೆ ಬೇಕಾದಷ್ಟು ಸಾಧನಗಳಿದ್ದವು. ಹಸುವಿನ ಡೈರಿ ಮನೆ ಸಮೀಪವೇ ಇತ್ತು. ಹೀಗಾಗಿ ಹಾಲು, ತುಪ್ಪ ಸಮೃದ್ಧವಾಗಿತ್ತು. ಶುದ್ಧ ಗಾಳಿ, ಪರಿಶುದ್ಧ ವಾತಾವರಣದಲ್ಲಿ ಬೆಳೆದು ಬಂದವನಿಗೆ ಇಲ್ಲಿಯ ಕಲುಷಿತ ವಾತಾವರಣ, ಹೊಗೆ, ಧೂಳು ಕಂಡರೆ ಅಲರ್ಜಿಯಾಗುತ್ತದೆ' ಎಂದು ಹೇಳುತ್ತಾರೆ ಜಾನ್.

'ವಾರಾಂತ್ಯದಲ್ಲಿ ಹಾಗೂ ಬಿಡುವಿನ ವೇಳೆಯಲ್ಲಿ ಸ್ನೇಹಿತರ ಜತೆಗೆ ಸುತ್ತುವುದು, ಪ್ರವಾಸ ಹೋಗುವುದು ಇಷ್ಟ ಎನ್ನುವ ಜಾನ್, ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಕಡೆಗಳಲ್ಲಿರುವ ಪ್ರವಾಸಿ ತಾಣಗಳು ಬಹಳ ಚೆನ್ನಾಗಿವೆ. ಐತಿಹಾಸಿಕ ಜಾಗಗಳು ಅದ್ಭುತವಾಗಿವೆ. ಟಿಪ್ಪುವಿನ ಕೋಟೆ, ಅರಮನೆ, ಮೈಸೂರು, ಶ್ರೀರಂಗಪಟ್ಟಣಗಳಲ್ಲಿರುವ ಐತಿಹಾಸಿಕ ತಾಣಗಳು ನಿಜಕ್ಕೂ ಮತ್ತೆ ಮತ್ತೆ ನೋಡುವಂತಿವೆ' ಎನ್ನುತ್ತಾರೆ.

'ಸಂಜೆ ಕೆಲಸ ಮುಗಿಸಿ ಬಂದ ಮೇಲೆ ಪಕ್ಕದ ಮನೆಯ ಪುಟ್ಟ ಹುಡುಗನ ಜತೆ ಕನ್ನಡ ಸಂಭಾಷಣೆ ನಡೆಸುತ್ತೇನೆ. ಆತನೊಂದಿಗೆ ಕಳೆಯುವ ಕ್ಷಣ ನಿಜಕ್ಕೂ ಪ್ರಪಂಚವನ್ನೇ ಮರೆಸುತ್ತದೆ. ಏಳನೇ ಕ್ಲಾಸ್‌ನ ಹುಡುಗ ನನಗೆ ಟೀಚರ್ ಎಂಬ ಭಾವನೆ ಅವನಲ್ಲಿದೆ. ಆತ ಪುಳಕಗೊಳ್ಳುತ್ತಲೇ ಕನ್ನಡ ಕಲಿಸುತ್ತಾನೆ. 'ಊಟ ಆಯ್ತಾ, ಅಲ್ಲಿ ನಿಲ್ಲಿ, ಶುಭ ರಾತ್ರಿ, ಹೇಗೆ ಇದ್ದೀರಾ' ಮುಂತಾದ ಶಬ್ದಗಳನ್ನು ದಿನವೂ ಬಳಸುವಂತೆ ಹೇಳುತ್ತಾನೆ. ಹೀಗೆ ಕನ್ನಡ ಕಲಿಯುವುದೇ ಒಂದು ಸಂಭ್ರಮ' ಎಂದು ಕನ್ನಡದೊಂದಿಗೆ ಬೆಳೆಸಿದ ಅನನ್ಯ ಸಂಬಂಧವನ್ನು ವಿವರಿಸುತ್ತಾರೆ ಈ ಟೆಕ್ಕಿ.



ನ್ಯೂಯಾರ್ಕ್‌ನಿಂದ ಬಂದ ಜಾನ್ ಚಾಕೋಸ್

ಚಿತ್ರ: ಎಸ್.ಕೆ. ದಿನೇಶ್

'ರೆಸ್ಟೋರೆಂಟ್‌ಗಳಾದ ಕ್ಯಾಲಿಫೋರ್ನಿಯ ಬರಿಟ್ಟೊ, ಶಿರೊ, ಘರ್ಝಿ ಮುಂತಾದ ಕಡೆ ಊಟ ತಿಂಡಿ ಮಾಡುವುದು ಇವರಿಗೆ ಇಷ್ಟವಂತೆ. ಚಿಕನ್ 65, ದಾಲ್ ಫ್ರೈ, ಚಪ್ಪರಿಸುವುದು ಖುಷಿಯೆನಿಸುತ್ತದೆ. ನಂದಿನಿ ರೆಸ್ಟೋರೆಂಟ್‌ನ ಮಸಾಲೆ ದೋಸೆ, ರವೆ ಇಡ್ಲಿ ಬಹಳ ಟೇಸ್ಟಿಯಾಗಿರುತ್ತದೆ' ಎನ್ನುತ್ತಾರೆ ಜಾನ್.

★ ಅವನೀಶ್